# ಕಾಡಿನ ಪ್ರೀತಿಯ 'ಮಾಸ್ತಿಗುಡಿ'

'ದನ ಕಾಯೋನು' ಚಿತ್ರದಲ್ಲಿ ಬಿಂದಾಸ್ ಆಗಿ ನಟಿಸಿ ಚಿತ್ರ ರಸಿಕರ ಗಮನ ಸೆಳೆದಿದ್ದ ವಿಜಯ್ ಈಗ 'ಮಾಸ್ತಿಗುಡಿ'ಯ ಮೂಲಕ ಮತ್ತೆ ತಮ್ಮ ಹಳೆಯ ಇಮೇಜ್‌ಗೆ ಮರಳುವ ಹಾಗೂ ಮತ್ತೊಂದು ವಿಭಿನ್ನ ಅವತಾರದಲ್ಲಿ ಪ್ರೇಕ್ಷಕರ ಮುಂದೆ ನಿಲ್ಲುವ ಪ್ರಯತ್ನದಲ್ಲಿದ್ದಾರೆ.

'ಮಾಸ್ತಿಗುಡಿ' ನಾಗಶೇಖರ್ ನಿರ್ದೇಶನದ ಸಿನಿಮಾ. 'ಅರಮನೆ', 'ಸಂಜು ವೆಡ್ಸ್ ಗೀತಾ', 'ಮೈನಾ' ಚಿತ್ರಗಳ ನಾಗಶೇಖರ್ 'ಮಾಸ್ತಿಗುಡಿ' ಮೂಲಕ ಮತ್ತೊಮ್ಮೆ ಗೆಲುವಿನ ರುಚಿ ಸವಿಯುವ ತವಕದಲ್ಲಿದ್ದಾರೆ. ವಿಜಯ್ ಅವರ ಇಮೇಜಿನ ಜೊತೆಗೆ ತಮ್ಮ ಛಾಪನ್ನೂ ಉಳಿಸಿಕೊಳ್ಳುವ ಪ್ರಯತ್ನ ಅವರದು. ನವಿರು ದೃಶ್ಯಗಳನ್ನು ಕಟ್ಟುವಲ್ಲಿ ಹೆಸರು ಮಾಡಿರುವ ಅವರು, ಮೊದಲ ಬಾರಿಗೆ ಸಾಹಸ ಪ್ರಧಾನ ಚಿತ್ರವೊಂದನ್ನು ರೂಪಿಸುತ್ತಿದ್ದಾರೆ. ಕಳೆದ ವಾರವಷ್ಟೇ ಕಂಠೀರವ ಸ್ಟುಡಿಯೊದಲ್ಲಿ ಭರ್ಜರಿ ಸಾಹಸ ದೃಶ್ಯವೊಂದನ್ನು ಚಿತ್ರೀಕರಿಸಿದ್ದಾರೆ. ಸ್ಟುಡಿಯೋದಲ್ಲಿ ಕಾಡಿನ ಪರಿಸರವನ್ನು ಚಿತ್ರತಂಡ ಸೃಷ್ಟಿಸಿದೆಯಂತೆ.

'ಮಾಸ್ತಿಗುಡಿ' ಪರಿಸರ ಕಾಳಜಿಯ ಸಂದೇಶವನ್ನು ಒಳಗೊಂಡಿರುವ ಚಿತ್ರವಂತೆ. ಕಾಡಿನ ಸವಕಳಿಯ ಜೊತೆಗೆ ಹುಲಿ ಸಂತತಿ ಇಳಿಮುಖವಾಗುತ್ತಿರುವ ಕುರಿತ ಆತಂಕವನ್ನೂ ಚಿತ್ರಕಥೆ ಒಳಗೊಂಡಿದೆ. ವಿಜಯ್ ಹಾಗೂ ಅಮೂಲ್ಯ ಜೋಡಿಯಾಗಿ ನಟಿಸಿರುವ ಈ ಚಿತ್ರದ ತಾರಾಗಣದಲ್ಲಿ ಹಿರಿಯ ನಟರಾದ ಶ್ರೀನಿವಾಸ ಮೂರ್ತಿ ಹಾಗೂ ರಂಗಾಯಣ ರಘು ವಿಭಿನ್ನ ಪಾತ್ರಗಳಲ್ಲಿ ಕಾಣಿಸಿಕೊಂಡಿದ್ದಾರಂತೆ. ಸಾಧು ಕೋಕಿಲ ಸಂಗೀತ, ಸತ್ಯ ಹೆಗ್ಡೆ ಛಾಯಾಗ್ರಹಣ ಚಿತ್ರಕ್ಕಿದೆ.





# ಮತ್ತೊಬ್ಬ ಒಡೆಯರ್!

ನಿರಂಜನ್ ಒಡೆಯರ್ ನಟನೆಯ 'ಜಲ್ಸಾ' ತೆರೆ ಕಾಣಲು ಸಿದ್ಧತೆ ನಡೆಸಿರುವ ಸಿನಿಮಾ. ಕಿರುತೆರೆಯ ಧಾರಾವಾಹಿಗಳ ಮೂಲಕ ಗುರ್ತಿಸಿಕೊಂಡಿರುವ ನಿರಂಜನ್ 'ಜಲ್ಸಾ' ಮೂಲಕ ನಾಯಕರಾಗಿದ್ದಾರೆ. ಹೀರೊ ಆಗುವ ನಾಯಕನ ಆಸೆಗೆ ಹೆತ್ತವರು (ಸರೋಜದೇವಿ–ಬಸವರಾಜು) ಬಂಡವಾಳ ಹೂಡುವ ಮೂಲಕ ನೀರೆರೆದಿದ್ದಾರೆ.

ಪ್ರೀತಿ ಮತ್ತು ಸಾಹಸದ ಕಥೆ 'ಜಲ್ಸಾ'ದಲ್ಲಿ ಇದೆಯಂತೆ. ಹಣದ ಬೆನ್ನು ಬಿದ್ದ ತರುಣ ಹಾಗೂ ಪ್ರೇಮವನ್ನು ನೆಚ್ಚಿನ ತರುಣಿಯ ಕಥೆ ಚಿತ್ರದ್ದು. ನಾಯಕಿಯ ಪಾತ್ರದಲ್ಲಿ 'ಆರ್‌ಎಕ್ಸ್ ಸೂರಿ' ಸಿನಿಮಾದ ಆಕಾಂಕ್ಷ ನಟಿಸಿದ್ದರೆ, ಮತ್ತೊಂದು ಪ್ರಮುಖ ಪಾತ್ರದಲ್ಲಿ ಅನೂಷ ನಟಿಸಿದ್ದಾರೆ. ಅನೂಷ ಕೂಡ ಕಿರುತೆರೆಯ ಪ್ರತಿಭೆ.

ಕಾಂತ ಕನ್ನಲ್ಲಿ 'ಜಲ್ಸಾ' ಚಿತ್ರದ ನಿರ್ದೇಶಕರು. ಶಶಾಂಕ್ ಅವರ ಗರಡಿಯಲ್ಲಿ ಪಳಗಿರುವ ಅವರು, ತಮ್ಮ ಗುರುಗಳಿಂದ ಕಲಿತಿದ್ದನ್ನು ಮೊದಲ ಬಾರಿಗೆ ಪ್ರಯೋಗಕ್ಕೊಡ್ಡಿದ್ದಾರೆ. ಕಾರ್ಯಕ್ರಮದಲ್ಲಿ ಹಾಜರಿದ್ದ ಶಶಾಂಕ್, ಶಿಷ್ಯನ ಪ್ರಯತ್ನಕ್ಕೆ ಶುಭ ಹಾರೈಸಿದರು. ವೀರಸಮರ್ಥ ಚಿತ್ರದ ಸಂಗೀತ ಸಂಯೋಜಕರು. ಒಂದು ಗೀತೆಯನ್ನು ಪುನೀತ್ ರಾಜಕುಮಾರ್ ಹಾಡಿದ್ದಾರಂತೆ. ಡಿಸೆಂಬರ್ ತಿಂಗಳಲ್ಲಿ 'ಜಲ್ಸಾ' ಚಿತ್ರವನ್ನು ತೆರೆ ಕಾಣಿಸಲು ಚಿತ್ರತಂಡ ಪ್ರಯತ್ನಿಸುತ್ತಿದೆ.